# ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ

## ಒಪ್ಪಿಗೆ-ಮತ್ತು-ಘೋಷಣಾ ನಮೂನೆ

(ಯೋಜನೆಗೆ ಸೇರುವ ಸದಸ್ಯರು "ನೋಂದಣಿ ಕಾಲಾವಧಿ"ಯಲ್ಲಿ ಭರ್ತಿ ಮಾಡತಕ್ಕದ್ದು)

ಏಜೆನ್ಸಿ/ಬಿ.ಸಿ.ಕೋಡ್ ________________

ಉಳಿತಾಯ ಖಾತೆ ಸಂಖ್ಯೆ: ______________

ಯೋಜನೆಗೆ ಸೇರಿದ ದಿನಾಂಕ: 1ನೇ ಜೂನ್/ಜುಲೈ/ಆಗಸ್ಟ್/ಸೆಪ್ಟೆಂಬರ್, 2015

| | |
|---|---|
| 1. ಪೂರ್ಣ ಹೆಸರು | 5. ಮೊಬೈಲ್/ಸಂಪರ್ಕ ಸಂಖ್ಯೆ: |
| 2. ವಿಳಾಸ | 6. ಇದ್ದಲ್ಲಿ ಆಧಾರ್ ಕಾರ್ಡ್ ನಂ. |
| 3. ಜನ್ಮ ದಿನಾಂಕ: (ಕೆವೈಸಿ ದಾಖಲಾತಿ ಪ್ರಕಾರ) ದಿನಾಂಕ/ತಿಂಗಳು/ವರ್ಷ | 7. ಯಾವುದಾದರೂ ನ್ಯೂನತೆಯಿಂದ ಬಳಲುತ್ತಿದ್ದರೆ, ಅವುಗಳ ವಿವರ |
| 4. ನಾಮಿನಿಯು ಮೈನರ್ ಆಗಿದ್ದಲ್ಲಿ ಪೋಷಕರ ಹೆಸರು ಮತ್ತು ವಿಳಾಸ: | 8. ನಾಮಿನಿ ಇದ್ದರೆ ಅವರ ಹೆಸರು ಮತ್ತು ವಿಳಾಸ ಮತ್ತು ಅವರ ಜೊತೆಗಿನ ಸಂಬಂಧ |

ಮೇಲ್ಕಂಡ ಬ್ಯಾಂಕಿನವರು ಮಾಸ್ಟರ್ ಪಾಲಿಸಿ ಹೋಲ್ಡರ್ ಎಂಬುದಾಗಿ ಪ್ರಾರಂಭಿಸಿರುವ ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯ ಸದಸ್ಯನಾಗಲು ನನ್ನ ಒಪ್ಪಿಗೆಯನ್ನು ಸೂಚಿಸಿರುತ್ತೇನೆ

ನಾನು ಈ ದಿನ ನನ್ನ ಉಳಿತಾಯ ಖಾತೆಯಿಂದ ರೂ.12/- (ಹನ್ನೆರಡು ರೂಪಾಯಿಗಳು ಮಾತ್ರ) ಗಳನ್ನು ಹಾಗೂ ಸೇವಾ ಶುಲ್ಕ, ಅನ್ವಯಿಸುವಲ್ಲಿ, 31ನೇ ಮೇ ಒಳಗಾಗಿ ಕಡಿತ ಮಾಡಿಕೊಳ್ಳಲು ಅಧಿಕಾರ ನೀಡಿರುತ್ತೇನೆ ಮತ್ತು ಮುಂದಿನ ಸೂಚನೆ ಬರುವವರೆಗೂ ಹನ್ನೆರಡು ರೂಪಾಯಿಗಳು ಅಥವಾ ಪರಿಷ್ಕೃತ ಮೊತ್ತವನ್ನು ನನಗೆ ತಿಳಿಸಿದ ಕೂಡಲೇ ಜಾರಿಗೆ ಬರುವಂತೆ (ಅನ್ವಯಿಸದೇ ಇರುವುದನ್ನು ಹೊಡೆದುಹಾಕಿ).

ಒಂದು ವೇಳೆ ನನ್ನ ಮರಣವಾದಲ್ಲಿ ಮೇಲ್ಕಂಡ ನಾಮಿನಿಯವರನ್ನು ನನ್ನ ಫಲಾನುಭವಿಯಾಗಿ ನೇಮಿಸಿರುತ್ತೇನೆ. ಒಂದು ವೇಳೆ ನನ್ನ ನಾಮಿನಿಯು 18 ವರ್ಷ ತುಂಬುವ ಮೊದಲು ನಾನು ಮರಣ ಹೊಂದಿದಲ್ಲಿ, ಆಗ್ಗೆ ಈ ಏಲೆ ತಿಳಿಸಿರುವ ಪೋಷಕರು ನನ್ನ ಮಾನಿನಿಯ ಪರವಾಗಿ ಸೌಲಭ್ಯವನ್ನು ಪಡೆಯಲು ನೇಮಕ ಮಾಡಿರುತ್ತೇನೆ.

ನಾನು ಬೇರೆ ಯಾವುದೇ ಉಳಿತಾಯ ಖಾತೆಯ ಅಡಿಯಲ್ಲಿ ಪ್ರಧಾನ ಮಂತ್ರಿ ಸುರಕ್ಷಾ ಯೋಜನೆಯ ಸದಸ್ಯನಾಗಿರುವುದಿಲ್ಲ. ಒಂದು ವೇಳೆ ಅಂತಹುದು ಕಂಡು ಬಂದಲ್ಲಿ ಆಗ್ಗೆ ನಾನು ಪಾವತಿ ಮಾಡಿರುವ ಪ್ರೀಮಿಯಂ ಹಣವನ್ನು ನನಗೆ ಮರುಪಾವತಿಸದೆ ಮುಟ್ಟುಗೋಲು ಹಾಕಿಕೊಳ್ಳಬಹುದು.

ಸದರಿ ಯೋಜನೆಯು ಈ ಯೋಜನೆಗೆ ನೋಂದಣಿ ಮಾಡಿಕೊಂಡ ಮುಂದಿನ ತಿಂಗಳ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ ಎಂದು ಒಪ್ಪಿರುತ್ತೇನೆ.

ಒಂದು ವೇಳೆ ಮಾಸ್ಟರ್ ಪಾಲಿಸಿ ಪ್ರಾರಂಭವಾದ ನಂತರ ನಾನು ಈ ಯೋಜನೆಗೆ ಸೇರಿದಲ್ಲಿ, ಆಗ್ಗೆ ನಾನು ವಾರ್ಷಿಕ ಪ್ರೀಮಿಯಂ ಅನ್ನು ಒಟ್ಟಿಗೇ ಪಾವತಿ ಮಾಡಲು ಒಪ್ಪಿರುತ್ತೇನೆ.

ಸದರಿ ಯೋಜನೆಯಲ್ಲಿ ನನ್ನ ಸದಸ್ಯತ್ವವು ನಾನು ಎಲ್ಲಾ ಪ್ರೀಮಿಯಂಗಳನ್ನು ಸರಿಯಾಗಿ ಪಾವತಿ ಮಾಡುತ್ತಾ ಬರುವವರೆಗೂ ಮತ್ತು ನಾನು 70 ವರ್ಷ ವಯಸ್ಸು ತಲುಪುವವರೆಗೂ ಜಾರಿಯಲ್ಲಿರುತ್ತದೆ ಎಂದು ಒಪ್ಪಿರುತ್ತೇನೆ.

ನಾನು ಸದರಿ ಯೋಜನೆಯ ನಿಯಮ ಮತ್ತು ನಿಬಂಧನೆಗಳನ್ನು ಪಾಲನೆ ಮಾಡಲು ಬದ್ಧನಾಗಿರುತ್ತೇನೆ. ಸದರಿ ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಗೆ ಪ್ರವೇಶ ನೀಡುವ ಸಂಬಂಧ ನನ್ನ ವೈಯಕ್ತಿಕ ವಿವರಗಳನ್ನು ____________________ (ವಿಮಾ ಕಂಪನಿಯ ಹೆಸರು) ರವರಿಗೆ ನೀಡಲು ಒಪ್ಪಿರುತ್ತೇನೆ.

ಈ ಮೇಲ್ಕಂಡ ಎಲ್ಲಾ ಅಂಶಗಳೂ ಸತ್ಯವಾಗಿರುತ್ತವೆ. ಮೇಲ್ಕಂಡ ಮಾಹಿತಿಗಳು ಸದರಿ ಯೋಜನೆಗೆ ನನನ್ನ ಪ್ರವೇಶಾತಿಗಾಗಿ ಸಲ್ಲಿಸಲಾಗಿರುತ್ತದೆ. ಒಂದು ವೇಳೆ ನಾನು ನೀಡಿರುವ ಮಾಹಿತಿಗಳು ಅಸತ್ಯವೆಂದು ಕಂಡು ಬಂದಲ್ಲಿ ಸದರಿ ಯೋಜನೆಯಲ್ಲಿ ನನ್ನ ಸದಸ್ಯತ್ವವನ್ನು ರದ್ದುಪಡಿಸಲಾಗುವುದು ಎಂದು ಒಪ್ಪಿರುತ್ತೇನೆ.

ದಿನಾಂಕ:

ಸಹಿ ಪರಿಶೀಲಿಸಿದೆ
(ಬ್ಯಾಂಕ್ ಶಾಖೆ ಅಧಿಕಾರಿ)

ಖಾತೆದಾರರ ಸಹಿ

### ಸ್ವೀಕೃತಿ ಹಾಗೂ ವಿಮಾ ದೃಢೀಕರಣ ಪತ್ರ

ನಾವು ಶ್ರೀ ________________ ಖಾತೆ ಸಂಖ್ಯೆ: ______________ ಆಧಾರ್ ಕಾರ್ಡ್ (ಲಭ್ಯವಿದ್ದಲ್ಲಿ) ರವರಿಂದ ಒಪ್ಪಿಗೆ-ಮತ್ತು-ಘೋಷಣೆ ಪತ್ರವನ್ನು ಪಡೆದುಕೊಂಡಿರುತ್ತೇವೆ. ಮಾಸ್ಟರ್ ಪಾಲಿಸಿ ನಂ____________ ಅಡಿಯಲ್ಲಿ ___________________ (ವಿಮಾ ಕಂಪನಿಯ ಹೆಸರು) ಸಂಸ್ಥೆಗೆ ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಗೆ ಸದಸ್ಯರಾಗಲು ಮತ್ತು ಅವರ ಖಾತೆಯಿಂದ ಹಣವನ್ನು ಜಮಾ ಮಾಡಿಕೊಳ್ಳಲು ಒಪ್ಪಿರುತ್ತಾರೆ.

ಬ್ಯಾಂಕ್ ಅಧಿಕಾರಿಯ ಸಹಿ ಮತ್ತು ಮೊಹರು

# ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ
## ಕ್ಲೇಮ್ ಫಾರಂ

ಈ ಅರ್ಜಿಯನ್ನು ಯಾವುದೇ ಪ್ರವೇಶದ ಜವಾಬ್ದಾರಿ ರಹಿತವಾಗಿ ನೀಡಿದ್ದು, ಇದನ್ನು ಪಡೆದುಕೊಂಡ 7 ದಿನಗಳ ಒಳಗಾಗಿ ಹಿಂತಿರುಗಿಸತಕ್ಕದ್ದು.

| | |
|---|---|
| ಕ್ಲೇಮ್ ನಂ. | ಪಾಲಿಸಿ ನಂ. |
| 1. ಪೂರ್ಣ ಹೆಸರು:<br>ವಿಳಾಸ:<br><br>ಸಂಪರ್ಕಿಸಬೇಕಾದ ಸಂಖ್ಯೆ: | 2. ಬ್ಯಾಂಕಿನ ಹೆಸರು ಮತ್ತು ವಿಳಾಸ:<br><br>ಉಳಿತಾಯ ಖಾತೆ ಸಂಖ್ಯೆ: |
| 3. (ಎ) ಅಪಘಾತ/ಮೃತ್ಯು ಯಾವಾಗ ಸಂಭವಿಸಿತು? ದಿನ, ದಿನಾಂಕ ಮತ್ತು ಮತ್ತು ಸಮಯವನ್ನು ತಿಳಿಸಿ.<br>(ಬಿ) ಯಾವ ಸ್ಥಳದಲ್ಲಿ ಸಂಭವಿಸಿತು?<br>(ಸಿ) ಮೃತ್ಯುವಿಗೆ ಸಂಬಂಧಪಟ್ಟ ಸಂಪೂರ್ಣ ಕಾರಣ ಮತ್ತು ಗಾಯಗಳ ವಿವರ ತಿಳಿಸಿ. | |
| 4. ಚಿಕಿತ್ಸೆ ಮಾಡಿದ ಡಾಕ್ಟರ್ ರವರ ಹೆಸರು ಮತ್ತು ವಿಳಾಸ: | |
| 5. ಅಗತ್ಯವಿದ್ದಲ್ಲಿ ವೈದ್ಯಕೀಯ ಅಥವಾ ಇತರೆ ಅಧಿಕಾರಿಗಳು ನಿಮ್ಮನ್ನು ಸಂಪರ್ಕಿಸಬಹುದಾದ ವಿಧಾನ ತಿಳಿಸಿ. | |
| | ಎ)<br>ಬಿ) |
| 6. (ಎ) ಒಂದು ವೇಳೆ ಮರಣ ಸಂಭವಿಸಿದಲ್ಲಿ, ಎಫ್.ಐ.ಆರ್/ಪೋಸ್ಟ್ ಮಾರ್ಟಮ್ ವರದಿ/ಮರಣ ಪ್ರಮಾಣ ಪತ್ರ ಲಗತ್ತಿಸಬೇಕು.<br>(ಬಿ) ಒಂದು ವೇಳೆ ಯಾವುದೇ ನ್ಯೂನತೆ ಉಂಟಾದಲ್ಲಿ. ಸರ್ಜನ್ ರವರಿಂದ ಪಡೆದುಕೊಂಡ ದೃಢೀಕರಣ ಪತ್ರ ಲಗತ್ತಿಸಬೇಕು. | |

ಈ ಮೇಲ್ಕಂಡಂತೆ ನಾನು ನೀಡಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ ಎಂದು ನಾನು ಘೋಷಿಸುತ್ತೇನೆ. ಒಂದು ವೇಳೆ ನಾನು ನೀಡಿರುವ ಮಾಹಿತಿಗಳು ತಪ್ಪು ಎಂದು ಕಂಡು ಬಂದಲ್ಲಿ ಅಥವಾ ಯಾವುದೇ ವಿಷಯನ್ನು ಮರೆಮಾಚಿದ್ದಲ್ಲಿ, ಪರಿಹಾರ ಪಡೆಯು ನನ್ನ ಅಧಿಕಾರವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ದಿನಾಂಕ:

ಸಹಿ
ಕ್ಲೇಮುದಾರ

# ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯ ನಿಯಮಗಳು

ಯೋಜನೆಯ ವಿವರ:

ಸದರಿ ಯೋಜನೆಯು ಒಂದು ವರ್ಷದ ಕಾಲಾವಧಿಯದ್ದಾಗಿರುತ್ತದೆ, ಪ್ರತಿ ವರ್ಷ ನವೀಕರಿಸತಕ್ಕದ್ದು. ಅಪಘಾತ ವಿಮಾ ಯೋಜನೆಯ ಅಡಿಯಲ್ಲಿ ಅಪಘಾತದಿಂದ ಸಂಭವಿಸಬಹುದಾದ ಮರಣ ಅಥವಾ ಅಫಘಾತದಿಂದ ಉಂಟಾಗಬಹುದಾದ ನ್ಯೂನತೆಗಳನ್ನು ಒಳಗೊಳ್ಳುತ್ತದೆ. ಈ ಯೋಜನೆಯು ಪಬ್ಲಿಕ್ ಸೆಕ್ಟರ್ ಜನರಲ್ ಇನ್ಸೂರೆನ್ಸ್ ಕಂಪನಿಗಳು (ಪಿಎಸ್‌ಜಿಐಸಿ) ಮತ್ತು ಇತರೆ ಜನರಲ್ ಇನ್ಸೂರೆನ್ಸ್ ಕಂಪನಿಗಳು ಅಂದರೆ ಮೇಲ್ಕಂಡ ಯೋಜನೆಯ ಉದ್ದೇಶಗಳನ್ನು ಹೊಂದಿರುವಂತಹ ಬ್ಯಾಂಕಿನವರ ಜೊತೆಯಲ್ಲಿ ಸಹಭಾಗಿಯಾಗಿ ರೂಪಿಸತಕ್ಕದ್ದಾಗಿರುತ್ತದೆ. ಇದರಲ್ಲಿ ಭಾಗವಹಿಸುವ ಬ್ಯಾಂಕ್‌ಗಳು ತಮ್ಮ ಇಚ್ಛೆಯಂತೆ ಯಾವುದೇ ಇನ್ಸೂರೆನ್ಸ್ ಕಂಪನಿಯವರನ್ನು ತಮ್ಮ ಯೋಜನೆಯನ್ನು ಅನುಷ್ಠಾನಗೊಳಸುವ ಸಲುವಾಗಿ ನೇಮಿಸಿಕೊಳ್ಳಬಹುದಾಗಿದೆ.

ಈ ಯೋಜನೆಯ ವ್ಯಾಪ್ತಿ: ಬ್ಯಾಂಕುಗಳಲ್ಲಿ ಉಳಿತಾಯ ಖಾತೆಯನ್ನು ಹೊಂದಿರುವ 18 ರಿಂದ 70 ವರ್ಷ ವಯಸ್ಸಿನ ಎಲ್ಲಾ ವಯೋಮಾನದವರು ಈ ಯೋಜನೆಯಲ್ಲಿ ಸೇರಲು ಅರ್ಹರಾಗಿರುತ್ತಾರೆ. ಒಂದು ವೇಳೆ ಒಂದಕ್ಕಿಂದ ಹೆಚ್ಚಿನ ಬ್ಯಾಂಕುಗಳಲ್ಲಿ ಒಂದಕ್ಕಿಂತ ಹೆಚ್ಚಿನ ಉಳಿತಾಯ ಖಾತೆಯನ್ನು ಹೊಂದಿರುವ ವ್ಯಕ್ತಿಯು, ಕೇವಲ ಯಾವುದಾದರೂ ಒಂದು ಖಾತೆಯಲ್ಲಿ ಮಾತ್ರ ಈ ಯೋಜನೆಗೆ ಅರ್ಹರಾಗಿರುತ್ತಾರೆ. ಬ್ಯಾಂಕ್ ಖಾತೆಗಾಗಿ ಆಧಾರ್ ಕಾರ್ಡ್ ಪ್ರಮುಖವಾಗಿ ಅಗತ್ಯವಾಗಿರುತ್ತದೆ.

ನೋಂದಣಿ ವಿಧಾನ/ಅವಧಿ : ಸದರಿ ಯೋಜನೆಯು 1ನೇ ಜೂನ್ ರಿಂದ 31ನೇ ಮೇ ವರೆಗೂ ಒಂದು ವರ್ಷದ ಅವಧಿಯಾಗಿರುತ್ತದೆ. ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಪ್ರತಿ ವರ್ಷ 31ನೇ ಮಾರ್ಚ್ ತಿಂಗಳ ಒಳಗಾಗಿ ಸಲ್ಲಿಸಬೇಕಾಗಿರುತ್ತದೆ ಮತ್ತು ಮುಂದುವರೆದ ಅವಧಿಯು 31ನೇ ಆಗಸ್ಟ್ 2015 ರವರೆಗೆ ಪ್ರಾರಂಭದಲ್ಲಿ ವಿಸ್ತರಿಸಬಹುದಾಗಿರುತ್ತದೆ. ಪ್ರಾರಂಭಿಕವಾಗಿ ಸದರಿ ಯೋಜನೆಯನ್ನು ಪರಿಚಯಿಸುವ ಸಲುವಾಗಿ ಭಾರತ ಸರ್ಕಾರವು ಈ ಯೋಜನೆಗೆ ಸೇರಿಕೊಳ್ಳುವ ಅವಧಿಯನ್ನು ಇನ್ನೂ ಮೂರು ತಿಂಗಳುಗಳ ಕಾಲ ವಿಸ್ತರಿಸಿದೆ ಅಂದರೆ 30ನೇ ನವೆಂಬರ್ 2015 ರವರೆಗೆ ವಿಸ್ತರಿಸಲಾಗಿರುತ್ತದೆ. ಕೆಲವು ನಿರ್ದಿಷ್ಟ ನಿಯಮಗಳ ಅಡಿಯಲ್ಲಿ ವಾರ್ಷಿಕ ಪ್ರೀಮಿಯಂ ಅನ್ನು ಒಂದೇ ಬಾರಿಗೆ ಪಾವತಿ ಮಾಡುವ ಅವಕಾಶ ಸಹ ಇರುತ್ತದೆ. ಅಲ್ಲದೆ ಅರ್ಜಿದಾರರು ಕಾಲಾಲಕ್ಕೆ ತಿದ್ದುಪಡಿಯಾಗುವ ನಿಯಮಗಳ ರೀತ್ಯಾ ಹೆಚ್ಚಿನ ಅವಕಾಶಗಳನ್ನು ನೀಡಲಾಗಿದೆ. ಈ ಮೇಲ್ಕಂಡ ನಿಯಮದಂತೆ ಯಾವುದೇ ವ್ಯಕ್ತಿಯು ಸದರಿ ಯೋಜನೆಯ ಮಧ್ಯದಲ್ಲಿ ಯೋಜನೆಯಿಂದ ಹೊರಬಂದಿದ್ದು, ಮುಂದೆ ಪುನಃ ಈ ಯೋಜನೆಗೆ ಸೇರಲು ಇಚ್ಛಿಸಿದಲ್ಲಿ ಆಗ್ಗೆ ಪುನಃ ಈ ಯೋಜನೆಗೆ ಸೇರಬಹುದಾಗಿರುತ್ತದೆ. ಈ ವಿಭಾಗದಲ್ಲಿ ಅರ್ಹ ಫಲಾನುಭವಿಗಳು ಒಂದು ವೇಳೆ ಸದರಿ ವರ್ಷದಲ್ಲಿ ಈ ಯೋಜನೆಗೆ ಸದಸ್ಯರಾಗದಿದ್ದಲ್ಲಿ ಮುಂದಿನ ವರ್ಷದಿಂದಲೂ ಸಹ ಅವರು ಈ ಯೋಜನೆಯನ್ನು ಮುಂದುವರೆಸಬಹುದು.

ಲಾಭಗಳು : ಈ ಕೆಳಕಂಡ ತಃಖ್ತೆಯ ಪ್ರಕಾರ:

| | ಲಾಭದ ತಃಖ್ತೆ | ವಿಮಾ ಮೊತ್ತ |
|---|---|---|
| ಎ | ಮರಣ | ರೂ.2 ಲಕ್ಷ |
| ಬಿ | ಎರಡೂ ಕಣ್ಣುಗಳ ಸಂಪೂರ್ಣ ಹಾನಿ, ಅಥವಾ ಎರಡೂ ಕೈಗಳ ಅಥವಾ ಕಾಲುಗಳ ಸಂಪೂರ್ಣ ಹಾನಿ, ಅಥವಾ ಒಂದು ಕಣ್ಣಿನ ದೃಷ್ಟಿ ಹಾನಿ ಅಥವಾ ಒಂದು ಕೈ ಅಥವಾ ಕಾಲಿಗೆ ಹಾನಿ | ರೂ.2 ಲಕ್ಷ |
| ಸಿ | ಒಂದು ಕಣ್ಣಿನ ಸಂಪೂರ್ಣ ದೃಷ್ಟಿ ಹಾನಿ ಅಥವಾ ಒಂದು ಕೈ ಅಥವಾ ಕಾಲಿನ ನಾನಿ | ರೂ.1 ಲಕ್ಷ |

ಪ್ರೀಮಿಯಂ: ಪ್ರತಿ ಸದಸ್ಯರಿಗೆ ವಾರ್ಷಿಕ ರೂ.12/-. ಈ ಯೋಜನೆಯ ಅಡಯಲ್ಲಿ ಖಾತೆದಾರರ ಉಳಿತಾಯ ಖಾತೆಯಿಂದ ಪ್ರತಿ ವರ್ಷ 1ನೇ ಜೂನ್ ಒಳಗಾಗಿ ಆಟೋ ಡೆಬಿಟ್ ಸೌಲಭ್ಯದ ಅಡಿಯಲ್ಲಿ ಈ ಮೊತ್ತವನ್ನು ಕಡಿತ ಮಾಡಿಕೊಳ್ಳಲಾಗುವುದು. ಒಂದು ವೇಳೆ ಜೂನ್ 1 ರ ನಂತರ ಪ್ರಾರಂಭವಾಗುವ ಆಟೋ ಡೆಬಿಟ್ ಪ್ರಕರಣಗಳಲ್ಲಿ ಆ ತಿಂಗಳ ಮುಂದಿನ ದಿನದಿಂದ ಪ್ರಾರಂಭವಾಗುವುದು.

ಪ್ರೀಮಿಯಂಗಳು ವಾರ್ಷಿಕ ಕ್ಲೇಮುಗಳ ಆಧಾರದ ಮೇಲೆ ಪರಿಷ್ಕರಿಸಲ್ಪಡುವುದು. ಒಂದು ವೇಳೆ ಯಾವುದೇ ಕೈಮೀರಿದ ಕಾರಣಗಳಿಂದಾಗಿ ಏರಿಳಿತಗಳು ಕಂಡು ಬಂದಲ್ಲಿ ಅಂತಹ ಸಂದರ್ಭದಲ್ಲಿ ಪ್ರಾರಂಭಿಕ ಮೂರು ವರ್ಷಗಳ ಅವಧಿಗೆ ಪರಿಗಣಿಸಲಾಗುವುದಿಲ್ಲ.

ಅರ್ಹತೆಗೆ ನಿಯಮಗಳು:

ಯಾವುದೇ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿರುವ 18 ವರ್ಷ (ತುಂಬಿರುವ) ಮತ್ತು 70 ವರ್ಷದ ಒಳಗಿನ ಯಾವುದೇ ವ್ಯಕ್ತಿಯು ಈ ಯೋಜನೆಯ ಫಲಾನುಭವಿಯಾಗಲು ಅರ್ಹರಾಗಿರುತ್ತಾರೆ.

ಮಾಸ್ಟರ್ ಪಾಲಿಸಿ ಹೋಲ್ಡರ್ : ಇದರಲ್ಲಿ ಭಾಗಿಯಾಗುವ ಬ್ಯಾಂಕ್, ಇದರಲ್ಲಿ ಭಾಗವಹಿಸುವ ಫಲಾನುಭವಿಯ ಪರವಾಗಿ ಮಾಸ್ಟರ್ ಪಾಲಿಸಿ ಹೋಲ್ಡರ್ ಆಗಿರುತ್ತಾರೆ. ಇದರಲ್ಲಿ ಭಾಗವಹಿಸುವ ಬ್ಯಾಂಕ್‌ಗಳ ಜೊತೆಯಲ್ಲಿ ಜನರಲ್ ಇನ್ಸೂರೆನ್ಸ್ ಕಂಪನಿಯವರು ಸೆಟಲ್‌ಮೆಂಟ್ ಪ್ರಕ್ರಿಯೆಯನ್ನು ಅಂತಿಮಗೊಳಿಸುತ್ತಾರೆ.

ಯೋಜನೆಯ ರದ್ದತಿ: ಈ ಕೆಳಕಂಡ ಯಾವುದಾದರೂ ಒಂದು ಸಂದರ್ಭದಲ್ಲಿ ಸದರಿ ಅಪಘಾತ ವಿಮಾ ಯೋಜನೆಯು ಅಂತ್ಯಗೊಳ್ಳುತ್ತದೆ.

1) 70 ವರ್ಷ ಪೂರ್ಣಗೊಳಿಸಿದ ನಂತರ.

2) ಬ್ಯಾಂಕಿನಲ್ಲಿ ಖಾತೆಯನ್ನು ರದ್ದುಗೊಳಿಸಿದಲ್ಲಿ ಅಥವಾ ಸದರಿ ವಿಮಾ ಯೋಜನೆಗೆ ಅವಶ್ಯಕವಾದಷ್ಟು ಮೊತ್ತವನ್ನು ಖಾತೆಯಲ್ಲಿ ಹೊಂದಿಲ್ಲದೇ ಇದ್ದಲ್ಲಿ.

3) ಒಂದು ವೇಳೆ ಸದಸ್ಯರು ಒಂದಕ್ಕಿಂತ ಹೆಚ್ಚಿನ ಖಾತೆ ಮತ್ತು ಪ್ರೀಮಿಯಂ ಅನ್ನು ಹೊಂದಿದ್ದಲ್ಲಿ, ವಿಮೆಯು ಕೇವಲ ಒಂದು ಖಾತೆಗೆ ಮಾತ್ರ ಸೀಮಿತಗೊಂಡು ಉಳಿಕೆ ಪ್ರೀಮಿಯಂ ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

4) ಒಂದು ವೇಳೆ ಸದರಿ ಯೋಜನೆಯಲ್ಲಿ ಸದಸ್ಯತ್ವವನ್ನು ಅವಶ್ಯಕವಾದ ಬಾಲೆನ್ಸ್ ಇಲ್ಲದೇ ಇರುವ ಪ್ರಯುಕ್ತ ಅಥವಾ ಇನ್ನಾವುದೇ ಆಡಳಿತಾತ್ಮಕ ಕಾರಣಗಳಿಂದ ರದ್ದುಪಡಿಸಿದ್ದಲ್ಲಿ, ಆಗ್ಗೆ ಆ ಸಮಯದಲ್ಲಿ ನಿಗಧಿಪಡಿಸುವ ನಿಯಮಗಳಂತೆ ಮತ್ತು ಪೂರ್ಣ ವಾರ್ಷಿಕ ಪ್ರೀಮಿಯಂ ಅನ್ನು ಪಾವತಿ ಮಾಡಿ ಪುನಃ ಪ್ರಾರಂಭಿಸಬಹುದಾಗಿರುತ್ತದೆ. ಇಂತಹ ಸಮಯದಲ್ಲಿ ಅವುಗಳನ್ನು ಪುನಃ ಪ್ರಾರಂಭಿಸುವ ನಿರ್ಧಾರವು ವಿಮಾ ಕಂಪನಿಯ ವಿವೇಚನೆಗೆ ಸಂಬಂಧಿಸಿದ್ದಾಗಿರುತ್ತದೆ.

ನಿರ್ವಹಣೆ:

ಸದರಿ ಯೋಜನೆಯು ಇನ್ಸೂರೆನ್ಸ್ ಕಂಪನಿಯವರು ನಿರ್ದಿಷ್ಟಪಡಿಸಿದ ನಿಯಮಗಳ ಪ್ರಕಾರ ಗಣನೆಗೆ ತೆಗೆದುಕೊಂಡು ನಿರ್ವಹಿಸಲಾಗುತ್ತದೆ. ಇದಕ್ಕೆ ಸಂಬಂಧಿಸಿದ ಡಾಟಾ ನಡವಳಿ ಮತ್ತು ಡಾಟಾ ಮಾದರಿಯನ್ನು ಪ್ರತ್ಯೇಕವಾಗಿ ನೀಡಲಾಗುತ್ತದೆ.

ಸದರಿ ಖಾತೆದಾರರಿಂದ ಆಟೋ ಡೆಬಿಟ್ ಪ್ರಕ್ರಿಯೆಯ ಮೂಲಕ ವಾರ್ಷಿಕ ಪ್ರೀಮಿಯಂ ಅನ್ನು ವಸೂಲು ಮಾಡುವ ಜವಾಬ್ದಾರಿಯು ಸಂಬಂಧಪಟ್ಟ ಬ್ಯಾಂಕ್‌ಗೆ ಸೇರಿದ್ದಾಗಿರುತ್ತದೆ.

ಸದರಿ ಬ್ಯಾಂಕುಗಳು ಪ್ರವೇಶದ ಅರ್ಜಿ/ಆಟೋ ಡೆಬಿಟ್ ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ಪಡೆದುಕೊಂಡು ತಮ್ಮ ಬಳಿ ಇಟ್ಟುಕೊಳ್ಳತಕ್ಕದ್ದು. ಕ್ಲೇಮುಗಳ ಸಮಯದಲ್ಲಿ ಅವುಗಳನ್ನು ಅಗತ್ಯವಿದ್ದಲ್ಲಿ ಹಾಜರುಪಡಿಸುವುದು. ಯಾವುದೇ ಸಮಯದಲ್ಲಾದರೂ ಸಹ ಇನ್ಸೂರೆನ್ಸ್ ಕಂಪನಿಯವರು ಸದರಿ ದಾಖಲಾತಿಗಳಿಗಾಗಿ ಕೋರಿಕೆ ಸಲ್ಲಿಸಬಹುದು.

ಸ್ವೀಕೃತಿ ಪ್ರತಿಯನ್ನು ವಿಮಾ ಕಂಪನಿಯ ಸ್ವೀಕೃತಿ ಪ್ರತಿ-ಕಂ-ದೃಢೀಕರಣ ಪತ್ರವಾಗಿ ನೀಡುವುದು.

ಪ್ರೀಮಿಯಂನ ಲೆಕ್ಕಾಚಾರ:

1) ವಿಮಾ ಕಂಪನಿಗೆ ವಿಮಾ ಪ್ರೀಮಿಯಂ : ಪ್ರತಿ ಸದಸ್ಯರಿಗೆ ತಲಾ ರೂ.10/- ವಾರ್ಷಿಕ

2) ಬಿಸಿ/ಮೈಕ್ರೋ/ಕಾರ್ಪೋರೇಟ್/ಏಜೆಂಟ್ ರವರಿಗೆ ಮರುಪಾವತಿ : ರೂ.1/- ವಾರ್ಷಿಕ ಪ್ರತಿ ಸದಸ್ಯರಿಗೆ

3) ಬ್ಯಾಂಕುಗಳಿಗೆ ಆಡಳಿತಾತ್ಮಕ ವೆಚ್ಚ ಮರುಪಾವತಿ : ರೂ.1/- ವಾರ್ಷಿಕ ಪ್ರತಿ ಸದಸ್ಯರಿಗೆ.

ಸದರಿ ಯೋಜನೆಯ ಪ್ರಾರಂಭದ ಉದ್ದೇಶಿತ ದಿನಾಂಕ: 1ನೇ ಜೂನ್ 2015. ಮುಂದಿನ ವಾರ್ಷಿಕ ನವೀಕರಣ ದಿನಾಂಕ: ಪ್ರತಿ ವರ್ಷ 1ನೇ ಜೂನ್ ತಿಂಗಳಿನಿಂದ ಮುಂದುವರೆಯುವುದು.

ಅಗತ್ಯ ಬಿದ್ದಲ್ಲಿ ನವೀಕರಣ ಸಂಬಂಧ ಹೊಸ ನಿಯಮಗಳ ಅನುಷ್ಠಾನಕೊಂಡಲ್ಲಿ ಈ ಯೋಜನೆಯು ಪ್ರಾರಂಭಕ್ಕೆ ಮುಂದಿತವಾಗಿ ನಿಲ್ಲಿಸಲಾಗುವುದು.

ಪುನರಾವರ್ತಿತ ಪ್ರಶ್ನೆಗಳು:

ಮುಂದಿನ ಪುಟದಲ್ಲಿ ಲಗತ್ತಿಸಿದೆ.

## ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯಲ್ಲಿ ಪುನರಾವರ್ತಿತವಾಗುವ ಪ್ರಶ್ನೆಗಳು

ಪ್ರಶ್ನೆ 1 : ಈ ಯೋಜನೆಯ ಗುಣವೇನು/ಯಾವ ರೀತಿಯ ಯೋಜನೆ?

ಈ ಯೋಜನೆಯು ಒಂದು ವರ್ಷದ ಅವಧಿಯದ್ದಾಗಿದ್ದು, ಪ್ರತಿ ವರ್ಷ ನವೀಕರಣಗೊಳಸಬಹುದಾಗಿರುತ್ತದೆ. ಇದರಲ್ಲಿ ಅಪಘಾತದಿಂದ ಉಂಟಾಗುವ ಸಾವು ಅಥವಾ ನ್ಯೂನತೆಗಳು ಒಳಗೊಳ್ಳುತ್ತವೆ.

ಪ್ರಶ್ನೆ 2 : ಈ ಯೋಜನೆಯ ಅನುಕೂಲತೆಗಳು ಏನು ಮತ್ತು ಪಾವತಿಯಾಗುವ ಪ್ರೀಮಿಯಂ ಏನು?

| | ಲಾಭದ ತಃಖ್ತೆ | ವಿಮಾ ಮೊತ್ತ |
|---|---|---|
| ಎ | ಮರಣ | ರೂ.2 ಲಕ್ಷ |
| ಬಿ | ಎರಡೂ ಕಣ್ಣುಗಳ ಸಂಪೂರ್ಣ ಹಾನಿ, ಅಥವಾ ಎರಡೂ ಕೈಗಳ ಅಥವಾ ಕಾಲುಗಳ ಸಂಪೂರ್ಣ ಹಾನಿ, ಅಥವಾ ಒಂದು ಕಣ್ಣಿನ ದೃಷ್ಟಿ ಹಾನಿ ಅಥವಾ ಒಂದು ಕೈ ಅಥವಾ ಕಾಲಿಗೆ ಹಾನಿ | ರೂ.2 ಲಕ್ಷ |
| ಸಿ | ಒಂದು ಕಣ್ಣಿನ ಸಂಪೂರ್ಣ ದೃಷ್ಟಿ ಹಾನಿ ಅಥವಾ ಒಂದು ಕೈ ಅಥವಾ ಕಾಲಿನ ನಾನಿ | ರೂ.1 ಲಕ್ಷ |

ವಾರ್ಷಿಕ ರೂ.12/- ತಲಾ ಪ್ರತಿ ಸದಸ್ಯರಿಗೆ.

ಪ್ರಶ್ನೆ 3 : ಪ್ರೀಮಿಯಂ ಪಾವತಿ ಮಾಡುವ ವಿಧಾನ?

ಈ ಯೋಜನೆಯಲ್ಲಿ ಸದಸ್ಯರಾದ ನಂತರ ಪ್ರತಿ ವರ್ಷ ಅಂತಹ ಖಾತೆದಾರರ ಉಳಿತಾಯ ಖಾತೆಯಿಂದ ಆಟೋ ಡೆಬಿಟ್ ಯೋಜನೆ ಅಡಿಯಲ್ಲಿ ಪ್ರೀಮಿಯಂ ಅನ್ನು ಕಡಿತ ಮಾಡಲಾಗುತ್ತದೆ. ಸದಸ್ಯರು ಯೋಜನೆಯ ಚಾಲ್ತಿಯಲ್ಲಿರುವ ಪೂರ್ಣ ವರ್ಷಗಳಿಗೆ ಒಂದೇ ಸಮಯದಲ್ಲಿ ಪ್ರೀಮಿಯಂ ಪಾವತಿ ಮಾಡಬಹುದು.

ಪ್ರಶ್ನೆ 4 : ಈ ಯೋಜನೆಯನ್ನು ಯಾರು ರೂಪಿಸಿರುತ್ತಾರೆ / ಜಾರಿಗೆ ತರುತ್ತಾರೆ:

ಈ ಯೋಜನೆಯು ಪಬ್ಲಿಕ್ ಸೆಕ್ಟರ್ ಜನರಲ್ ಇನ್ಸೂರೆನ್ಸ್ ಕಂಪನಿಗಳು (ಪಿಎಸ್‌ಜಿಐಸಿ) ಮತ್ತು ಇತರೆ ಜನರಲ್ ಇನ್ಸೂರೆನ್ಸ್ ಕಂಪನಿಗಳು ಅಂದರೆ ಮೇಲ್ಕಂಡ ಯೋಜನೆಯ ಉದ್ದೇಶಗಳನ್ನು ಹೊಂದಿರುವಂತಹ ಬ್ಯಾಂಕಿನವರ ಜೊತೆಯಲ್ಲಿ ಸಹಭಾಗಿಯಾಗಿ ರೂಪಿಸತಕ್ಕದ್ದಾಗಿರುತ್ತದೆ. ಇದರಲ್ಲಿ ಭಾಗವಹಿಸುವ ಬ್ಯಾಂಕ್‌ಗಳು ತಮ್ಮ ಇಚ್ಛೆಯಂತೆ ಯಾವುದೇ ಇನ್ಸೂರೆನ್ಸ್ ಕಂಪನಿಯವರನ್ನು ತಮ್ಮ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ನೇಮಿಸಿಕೊಳ್ಳಬಹುದಾಗಿದೆ.

ಪ್ರಶ್ನೆ 5 : ಈ ಯೋಜನೆಗೆ ಸದಸ್ಯರಾಗಲು ಅರ್ಹತೆಗಳು ಏನು?

ಯಾವುದೇ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿರುವ 18 ವರ್ಷ (ತುಂಬಿರುವ) ಮತ್ತು 70 ವರ್ಷದ ಒಳಗಿನ ಯಾವುದೇ ವ್ಯಕ್ತಿಯು ಈ ಯೋಜನೆಯ ಫಲಾನುಭವಿಯಾಗಲು ಅರ್ಹರಾಗಿರುತ್ತಾರೆ. ಮತ್ತು ಅಂತಹ ಸದಸ್ಯರು ಕೇವಲ ಒಂದು ಖಾತೆಯಲ್ಲಿ ಮಾತ್ರ ಈ ಯೋಜನೆಗೆ ಅರ್ಹರಾಗಿರುತ್ತಾರೆ.

ಪ್ರಶ್ನೆ 6 : ನೋಂದಣಿಯ ಅವಧಿ ಮತ್ತು ವಿಧಾನ?

ಸದರಿ ಯೋಜನೆಯು 1ನೇ ಜೂನ್ ರಿಂದ 31ನೇ ಮೇ ವರೆಗೂ ಒಂದು ವರ್ಷದ ಅವಧಿಯಾಗಿರುತ್ತದೆ. ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಪ್ರತಿ ವರ್ಷ 31ನೇ ಮಾರ್ಚ್ ತಿಂಗಳ ಒಳಗಾಗಿ ಸಲ್ಲಿಸಬೇಕಾಗಿರುತ್ತದೆ ಮತ್ತು ಮುಂದುವರೆದ ಅವಧಿಯು 31ನೇ ಆಗಸ್ಟ್ 2015 ರವರೆಗೆ ಪ್ರಾರಂಭದಲ್ಲಿ ವಿಸ್ತರಿಸಬಹುದಾಗಿರುತ್ತದೆ. ಪ್ರಾರಂಭಿಕವಾಗಿ ಸದರಿ ಯೋಜನೆಯನ್ನು ಪರಿಚಯಿಸುವ ಸಲುವಾಗಿ ಭಾರತ ಸರ್ಕಾರವು ಈ ಯೋಜನೆಗೆ ಸೇರಿಕೊಳ್ಳುವ ಅವಧಿಯನ್ನು ಇನ್ನೂ ಮೂರು ತಿಂಗಳುಗಳ ಕಾಲ ವಿಸ್ತರಿಸಿದೆ ಅಂದರೆ 30ನೇ

ನವೆಂಬರ್ 2015 ರವರೆಗೆ ವಿಸ್ತರಿಸಲಾಗಿರುತ್ತದೆ. ಕೆಲವು ನಿರ್ದಿಷ್ಟ ನಿಯಮಗಳ ಅಡಿಯಲ್ಲಿ ವಾರ್ಷಿಕ ಪ್ರೀಮಿಯಂ ಅನ್ನು ಒಂದೇ ಬಾರಿಗೆ ಪಾವತಿ ಮಾಡುವ ಅವಕಾಶ ಸಹ ಇರುತ್ತದೆ.

ಒಂದು ವರ್ಷದ ಅವಧಿಯ ನಂತರವೂ ಸದರಿ ಯೋಜನೆಯಲ್ಲಿ ಮುಂದುವರೆಯಲು ಇಚ್ಛಿಸುವ ಸದಸ್ಯರು ಆ ವರ್ಷದ 31ನೇ ಮೇ ತಿಂಗಳಿನ ಒಳಗಾಗಿ ಈ ಬಗ್ಗೆ ತಿಳಿಸತಕ್ಕದ್ದು. ಒಂದು ವೇಳೆ ವಿಳಂಬವಾಗಿ ತಿಳುವಳಿಕೆ ನೀಡಿದ್ದಲ್ಲಿ, ಆಗ್ಗೆ ವಾರ್ಷಿಕ ಪ್ರೀಮಿಯಂ ಅನ್ನು ಒಟ್ಟಾಗಿ ಪಾವತಿ ಮಾಡುವುದರ ಮೂಲಕ ಸಲ್ಲಿಸಬಹುದು.

ಪ್ರಶ್ನೆ 7 : ಒಂದು ವೇಳೆ ಪ್ರಾರಂಭಿಕ ವರ್ಷದಲ್ಲಿ ಸದಸ್ಯರಾಗದೇ ಇದ್ದವರೂ ಸಹ ಮುಂದಿನ ವರ್ಷಗಳಲ್ಲಿ ಸದಸ್ಯರಾಗಬಹುದೇ?

ಹೌದು. ಆಟೋ ಡೆಬಿಟ್ ಯೋಜನೆಯ ಮೂಲಕ ಪ್ರೀಮಿಯಂ ಪಾವತಿ ಮಾಡಿದ ನಂತರ ಸದಸ್ಯರಾಗಬಹುದು. ಅದೇ ರೀತಿ ಮುಂದಿನ ವರ್ಷಗಳಲ್ಲಿ ಹೊಸ ಅರ್ಹ ಪ್ರವೇಶಾತಿಗಳನ್ನು ಮಾಡಲಾಗುವುದು

ಪ್ರಶ್ನೆ 8 : ಒಂದು ವೇಳೆ ಮಧ್ಯದಲ್ಲಿ ಬಿಟ್ಟುಹೋದ ಸದಸ್ಯರೂ ಸಹ ಪುನಃ ಈ ಯೋಜನೆಗೆ ಸೇರಬಹುದೇ?
ಸದರಿ ಯೋಜನೆಯ ಮಧ್ಯದಲ್ಲಿ ಯಾವುದೇ ಕಾರಣಕ್ಕೂ ಬಿಟ್ಟುಹೋದ ಸದಸ್ಯರು ಪಾವತಿ ಮಾಡಬೇಕಾದ ಪ್ರೀಮಿಯಂ ಅನ್ನು ಪಾವತಿ ಮಾಡಿ ಪುನಃ ಸೇರಬಹುದಾಗಿದ್ದು, ಆ ಸಮಯದಲ್ಲಿ ವಿಧಿಸುವ ನಿಯಮಗಳನ್ನು ಪಾಲನೆ ಮಾಡಬೇಕಾಗಿರುತ್ತದೆ.

ಪ್ರಶ್ನೆ: 9 : ಈ ಯೋಜನೆಯ ಮಾಸ್ಟರ್ ಪಾಲಿಸಿ ಹೋಲ್ಡರ್ ಯಾರು?
ಈ ಯೋಜನೆಯು ಪಬ್ಲಿಕ್ ಸೆಕ್ಟರ್ ಜನರಲ್ ಇನ್ಸೂರೆನ್ಸ್ ಕಂಪನಿಗಳು (ಪಿಎಸ್‌ಜಿಐಸಿ) ಮತ್ತು ಇತರೆ ಜನರಲ್ ಇನ್ಸೂರೆನ್ಸ್ ಕಂಪನಿಗಳು ಅಂದರೆ ಮೇಲ್ಕಂಡ ಯೋಜನೆಯ ಉದ್ದೇಶಗಳನ್ನು ಹೊಂದಿರುವಂತಹ ಬ್ಯಾಂಕಿನವರ ಜೊತೆಯಲ್ಲಿ ಸಹಭಾಗಿಯಾಗಿ ರೂಪಿಸತಕ್ಕದ್ದಾಗಿರುತ್ತದೆ. ಇದರಲ್ಲಿ ಭಾಗವಹಿಸುವ ಬ್ಯಾಂಕ್‌ಗಳು ತಮ್ಮ ಇಚ್ಛೆಯಂತೆ ಯಾವುದೇ ಇನ್ಸೂರೆನ್ಸ್ ಕಂಪನಿಯವರನ್ನು ತಮ್ಮ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ನೇಮಿಸಿಕೊಳ್ಳಬಹುದಾಗಿದೆ.

ಪ್ರಶ್ನೆ 10 : ಅಪಘಾತ ವಿಮೆಯು ಯಾವ ಸಂದರ್ಭದಲ್ಲಿ ನಿಂತು ಹೋಗುತ್ತದೆ.
ಈ ಕೆಳಕಂಡ ಯಾವುದಾದರೂ ಒಂದು ಸಂದರ್ಭದಲ್ಲಿ ಸದರಿ ಅಪಘಾತ ವಿಮಾ ಯೋಜನೆಯು ಅಂತ್ಯಗೊಳ್ಳುತ್ತದೆ.

1) 70 ವರ್ಷ ಪೂರ್ಣಗೊಳಿಸಿದ ನಂತರ.

2) ಬ್ಯಾಂಕಿನಲ್ಲಿ ಖಾತೆಯನ್ನು ರದ್ದುಗೊಳಿಸಿದಲ್ಲಿ ಅಥವಾ ಸದರಿ ವಿಮಾ ಯೋಜನೆಗೆ ಅವಶ್ಯಕವಾದಷ್ಟು ಮೊತ್ತವನ್ನು ಖಾತೆಯಲ್ಲಿ ಹೊಂದಿಲ್ಲದೇ ಇದ್ದಲ್ಲಿ.

3) ಒಂದು ವೇಳೆ ಸದಸ್ಯರು ಒಂದಕ್ಕಿಂತ ಹೆಚ್ಚಿನ ಖಾತೆ ಮತ್ತು ಪ್ರೀಮಿಯಂ ಅನ್ನು ಹೊಂದಿದ್ದಲ್ಲಿ, ವಿಮೆಯು ಕೇವಲ ಒಂದು ಖಾತೆಗೆ ಮಾತ್ರ ಸೀಮಿತಗೊಂಡು ಉಳಿಕೆ ಪ್ರೀಮಿಯಂ ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

4) ಒಂದು ವೇಳೆ ಸದರಿ ಯೋಜನೆಯಲ್ಲಿ ಸದಸ್ಯತ್ವವನ್ನು ಅವಶ್ಯಕವಾದ ಬಾಲೆನ್ಸ್ ಇಲ್ಲದೇ ಇರುವ ಪ್ರಯುಕ್ತ ಅಥವಾ ಇನ್ನಾವುದೇ ಆಡಳಿತಾತ್ಮಕ ಕಾರಣಗಳಿಂದ ರದ್ದುಪಡಿಸಿದ್ದಲ್ಲಿ, ಆಗ್ಗೆ ಆ ಸಮಯದಲ್ಲಿ ನಿಗಧಿಪಡಿಸುವ ನಿಯಮಗಳಂತೆ ಮತ್ತು ಪೂರ್ಣ ವಾರ್ಷಿಕ ಪ್ರೀಮಿಯಂ ಅನ್ನು ಪಾವತಿ ಮಾಡಿ ಪುನಃ ಪ್ರಾರಂಭಿಸಬಹುದಾಗಿರುತ್ತದೆ. ಇಂತಹ ಸಮಯದಲ್ಲಿ ಅವುಗಳನ್ನು ಪುನಃ ಪ್ರಾರಂಭಿಸುವ ನಿರ್ಧಾರವು ವಿಮಾ ಕಂಪನಿಯ ವಿವೇಚನೆಗೆ ಸಂಬಂಧಿಸಿದ್ದಾಗಿರುತ್ತದೆ.

ಪ್ರಶ್ನೆ 11: ವಿಮಾ ಕಂಪನಿಯ ಮತ್ತು ಬ್ಯಾಂಕ್ ರವರ ಪಾತ್ರವೇನು?

(1) ಈ ಯೋಜನೆಯು ಪಬ್ಲಿಕ್ ಸೆಕ್ಟರ್ ಜನರಲ್ ಇನ್ಸೂರೆನ್ಸ್ ಕಂಪನಿಗಳು (ಪಿಎಸ್‌ಜಿಐಸಿ) ಮತ್ತು ಇತರೆ ಜನರಲ್ ಇನ್ಸೂರೆನ್ಸ್ ಕಂಪನಿಗಳು ಅಂದರೆ ಮೇಲ್ಕಂಡ ಯೋಜನೆಯ ಉದ್ದೇಶಗಳನ್ನು ಹೊಂದಿರುವಂತಹ ಬ್ಯಾಂಕಿನವರ ಜೊತೆಯಲ್ಲಿ ಸಹಭಾಗಿಯಾಗಿ ರೂಪಿಸತಕ್ಕದ್ದಾಗಿರುತ್ತದೆ.

(2) ಖಾತೆದಾರರಿಂದ ವಾರ್ಷಿಕ ಪ್ರೀಮಿಯಂ ಅನ್ನು ಒಂದೇ ಬಾರಿಗೆ ಪಾವತಿ ಮಾಡಿಸಿಕೊಳ್ಳುವ ಜವಾಬ್ದಾರಿಯು ಸಂಬಂದಪಟ್ಟ ಬ್ಯಾಂಕ್ ವಿಮಾ ಕಂಪನಿಯದ್ದಾಗಿರುತ್ತದೆ ಮತ್ತು ಅವುಗಳನ್ನು ಪಾವತಿಯ ದಿನಾಂಕದ ಮುಂಚಿತವಾಗಿ ಪಾವತಿ ಮಾಡಿಸಕೊಳ್ಳತಕ್ಕದ್ದು.

(3) ಸದರಿ ಬ್ಯಾಂಕುಗಳು ಪ್ರವೇಶದ ಅರ್ಜಿ/ಆಟೋ ಡೆಬಿಟ್ ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ಪಡೆದುಕೊಂಡು ತಮ್ಮ ಬಳಿ ಇಟ್ಟುಕೊಳ್ಳತಕ್ಕದ್ದು. ಕ್ಲೇಮುಗಳ ಸಮಯದಲ್ಲಿ ಅವುಗಳನ್ನು ಅಗತ್ಯವಿದ್ದಲ್ಲಿ ಹಾಜರುಪಡಿಸುವುದು. ಯಾವುದೇ ಸಮಯದಲ್ಲಾದರೂ ಸಹ ಇನ್ಸೂರೆನ್ಸ್ ಕಂಪನಿಯವರು ಸದರಿ ದಾಖಲಾತಿಗಳಿಗಾಗಿ ಕೋರಿಕೆ ಸಲ್ಲಿಸಬಹುದು.

ಪ್ರಶ್ನೆ 12 : ಪ್ರೀಮಿಯಂ ಅನ್ನು ಯಾವ ರೀತಿ ಪರಿಗಣಿಸಲಾಗುತ್ತದೆ.

1) ವಿಮಾ ಕಂಪನಿಗೆ ವಿಮಾ ಪ್ರೀಮಿಯಂ : ಪ್ರತಿ ಸದಸ್ಯರಿಗೆ ತಲಾ ರೂ.10/- ವಾರ್ಷಿಕ

2) ಬಿಸಿ/ಮೈಕ್ರೋ/ಕಾರ್ಪೊರೇಟ್/ಏಜೆಂಟ್ ರವರಿಗೆ ಮರುಪಾವತಿ : ರೂ.1/- ವಾರ್ಷಿಕ ಪ್ರತಿ ಸದಸ್ಯರಿಗೆ

3) ಬ್ಯಾಂಕುಗಳಿಗೆ ಆಡಳಿತಾತ್ಮಕ ವೆಚ್ಚ ಮರುಪಾವತಿ : ರೂ.1/- ವಾರ್ಷಿಕ ಪ್ರತಿ ಸದಸ್ಯರಿಗೆ.

ಪ್ರಶ್ನೆ : 13 : ಈ ಯೋಜನೆಯು ಸದಸ್ಯರ ಇನ್ನಾವುದೇ ಇನ್ಸೂರೆನ್ಸ್ ಯೋಜನೆಯ ಜೊತೆಗೆ ಬರುತ್ತದೆಯೇ?

ಹೌದು